# ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು –560056

ಸಂಖ್ಯೆ: ಎಸಿಎ.4/ಸ್ನಾ.ಪ.ಪ್ರ/UUCMS Upload/2022–23 ದಿನಾಂಕ: 17.01.2023

## ಸುತ್ತೋಲೆ

ವಿಷಯ : ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳಲ್ಲಿ 2022–23ನೇ ಸಾಲಿನಲ್ಲಿ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಮಾಹಿತಿಯನ್ನು UUCMS ಪೋರ್ಟಲ್‌ನಲ್ಲಿ ದಾಖಲಿಸುವ ಬಗ್ಗೆ ಹಾಗೂ 3ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಪ್ರವೇಶ ಶುಲ್ಕವನ್ನು UUCMS ಪೋರ್ಟಲ್‌ನಲ್ಲಿ ಪಾವತಿಸುವ ದಿನಾಂಕವನ್ನು ಮುಂದೂಡಿರುವ ಬಗ್ಗೆ.

ಉಲ್ಲೇಖ: 1. ಸಂಖ್ಯೆ: ಎಸಿಎ.4/ಸ್ನಾ.ಪ.ಪ್ರ/UUCMS Upload/2022–23, ದಿನಾಂಕ: 4.01.2023
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ : 16.01.2023.

* * *

ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳಿಗೆ ಹಾಗೂ ಸಂಯೋಜಿತ ಕಾಲೇಜಿನಲ್ಲಿ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ 2022–23ನೇ ಸಾಲಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಮಾಹಿತಿಯನ್ನು UUCMS ಪೋರ್ಟಲ್‌ನಲ್ಲಿ ಅಪ್–ಲೋಡ್ ಮಾಡಲು ದಿನಾಂಕ 13.1.2023 ರವರೆಗೆ ನಿಗಧಿಪಡಿಸಲಾಗಿತ್ತು. ಆದರೆ UUCMS ಪೋರ್ಟಲ್‌ನಲ್ಲಿ ವಿದ್ಯಾರ್ಥಿಗಳ ಮಾಹಿತಿಯು ಇನ್ನೂ ಪೂರ್ಣಗೊಂಡಿರುವುದಿಲ್ಲ. ಆದ್ದರಿಂದ ಯು.ಯು.ಸಿ.ಎಂ.ಎಸ್ ಪೋರ್ಟ್‌ಲ್‌ನ ಸಂಯೋಜಕರಾದ ಶ್ರೀ ಪ್ರಧಾನ್ ಮತ್ತು ಶ್ರೀಮತಿ ಕಾಂತಿಮತಿ, ಪ್ರೋಗ್ರಾಮರ್ ಹಾಗೂ ವಿದ್ಯಾರ್ಥಿ ವೇತನ ವಿಭಾಗದ ಸಂಯೋಜಕರಾದ ಶ್ರೀ ರಜನಿಕಾಂತ್ ರವರ ಸಹಯೋಗದಲ್ಲಿ ವಿದ್ಯಾರ್ಥಿಗಳ ಮಾಹಿತಿಯನ್ನು UUCMS ಪೋರ್ಟಲ್‌ನಲ್ಲಿ ಅಪ್–ಲೋಡ್ ಮಾಡಲು **ದಿನಾಂಕ 31.01.2023 ರವರೆಗೆ ವಿಸ್ತರಿಸಲಾಗಿದೆ.** ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರು, ಸಂಯೋಜಿತ ಕಾಲೇಜಿನ ಪ್ರಾಂಶುಪಾಲರು ಎಲ್ಲಾ ವಿದ್ಯಾರ್ಥಿಗಳ ಮಾಹಿತಿಯನ್ನು ಕಡ್ಡಾಯವಾಗಿ ಅಪ್–ಲೋಡ್ ಮಾಡಲು ಸೂಚಿಸಲಾಗಿದೆ.

ಮುಂದುವರೆದು, ಪ್ರಸ್ತುತವಾಗಿ 3ನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳು ಪ್ರವೇಶ ಶುಲ್ಕವನ್ನು UUCMS ಪೋರ್ಟಲ್ ಮೂಲಕ ಪಾವತಿಸುವ ದಿನಾಂಕವನ್ನು **ದಿನಾಂಕ 31.1.2023 ರವರೆಗೆ ವಿಸ್ತರಿಸಲಾಗಿದೆ.**

ವಿಶ್ವವಿದ್ಯಾಲಯದ ಯು.ಯು.ಸಿ.ಎಂ.ಎಸ್ ಪೋರ್ಟ್‌ಲ್‌ನ ಸಂಯೋಜಕರಾದ ಶ್ರೀ ಪ್ರಧಾನ್, ಶ್ರೀಮತಿ ಕಾಂತಿಮತಿ ಹಾಗೂ ವಿದ್ಯಾರ್ಥಿ ವೇತನ ವಿಭಾಗದ ಸಂಯೋಜಕರಾದ ಶ್ರೀ ರಜನಿಕಾಂತ್ ರವರು ಮೇಲೆ ತಿಳಿಸಿರುವ ದಿನಾಂಕದಂದು 2022–23ನೇ ಸಾಲಿನಲ್ಲಿ ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಮಾಹಿತಿಯನ್ನು UUCMS ಪೋರ್ಟಲ್‌ನಲ್ಲಿ ಅಪ್–ಲೋಡ್ ಮಾಡಬೇಕೆಂದು ಸೂಚಿಸಲಾಗಿದೆ.

17/1/23

ಕುಲಸಚಿವರು

ಗೆ,

1. ಶ್ರೀ ಪ್ರದಾನ್, ಕೋ–ಆರ್ಡಿನೇಟರ್, UUCMS ಪೋರ್ಟಲ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
2. ಶ್ರೀಮತಿ ಕಾಂತಿಮತಿ, ಪ್ರೋಗ್ರಾಮರ್, UUCMS ಪೋರ್ಟಲ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
3. ಶ್ರೀ ರಜನೀಕಾಂತ್, ಕೋ–ಆರ್ಡಿನೇಟರ್, ವಿದ್ಯಾರ್ಥಿ ವೇತನ (SSP), ಹೆಚ್.ಆರ್.ಡಿ.ಸಿ, ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**ಪ್ರತಿ :**

1. ಎಲ್ಲಾ ವಿಭಾಗದ ಅಧ್ಯಕ್ಷರುಗಳು/ಸಂಯೋಜನಾಧಿಕಾರಿಗಳು, ಜ್ಞಾನಭಾರತಿ ಆವರಣ ಮತ್ತು ಸ್ನಾತಕೋತ್ತರ ಕೇಂದ್ರ ರಾಮನಗರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
2. ಪ್ರಾಂಶುಪಾಲರು, ದೈಹಿಕ ಶಿಕ್ಷಣ ಕಾಲೇಜು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
3. ಪ್ರಾಂಶುಪಾಲರುಗಳು, ಸಂಯೋಜಿತ ಕಾಲೇಜುಗಳು (ಸ್ನಾತಕೋತ್ತರ) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
4. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
5. ಕಾರ್ಯದರ್ಶಿಗಳು/ಕುಲಪತಿಗಳು/ಕುಲಸಚಿವರು/ಕುಲಸಚಿವರು (ಮೌಲ್ಯಮಾಪನ) ಮತ್ತು ಆಪ್ತ ಸಹಾಯಕರು ವಿತ್ತಾಧಿಕಾರಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
6. ಸೂಕ್ತ ಕ್ರಮಕ್ಕೆ ಸಿಸ್ಟಂ ಅನಲಿಸ್ಟ್, E-Governance Cell, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
7. ನೋಡಲ್ ಅಧಿಕಾರಿಗಳು ಯು.ಯು.ಸಿ.ಎಂ.ಎಸ್. ಪೋರ್ಟಲ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
8. ಕಛೇರಿ ಪ್ರತಿ.